

## 'ನನಗಲ್ಲ'

ಸರ್ಕಾರಿ ಕೆಲಸದಲ್ಲಿದ್ದ ಗುಂಡ ನಿವೃತ್ತಿ ಹೊಂದಿದ. ಅವನು ಹೆಂಡತಿಗೆ – 'ನೋಡೆ, ಇನ್ನು ಮುಂದೆ ನನಗೆ ಬರೋ ಆದಾಯ ತುಂಬಾ ಕಡಿಮೆ. ಆದ್ದರಿಂದ ನಾಳೆಯಿಂದ ಸಾಧ್ಯವಾದಷ್ಟು ಖರ್ಚು ಕಡಿಮೆ ಮಾಡಬೇಕು. ಹಾಗಾಗಿ ಇನ್ನು ಮುಂದೆ ಪದೇ ಪದೇ ಕಾಫಿ ಮಾಡೋದು, ಚಕ್ಕುಲಿ, ಕೋಡುಬಳೆ, ರವೆ ಉಂಡೆ ಮಾಡೋದು ಎಲ್ಲಾ ಬಂದ್! ತಿಳೀತಾ' ಎಂದ.

ಒಂದು ವಾರದ ನಂತರ ಅವನ ಹೆಂಡತಿ ಘಮ ಘಮಿಸುವ ತುಪ್ಪದಿಂದ ಮಾಡಿದ್ದ ಮೈಸೂರುಪಾಕು ತಿನ್ನುತ್ತಿದ್ದಳು. ಗುಂಡ ರೇಗುತ್ತ, 'ಏನೇ ನೀನು ಖರ್ಚು ಕಡಿಮೆ ಮಾಡಬೇಕು ಅಂದ್ರೆ ಇನ್ನೂ ಜಾಸ್ತಿ ಮಾಡ್ತಾ ಇದೀಯಲ್ಲ ಯಾಕೆ?' ಎಂದು ಕೇಳಿದ.

ಅದಕ್ಕೆ ಅವಳು ಮತ್ತೊಂದು ಮೈಸೂರುಪಾಕಿನ ತುಂಡನ್ನು ಬಾಯಲ್ಲಿಟ್ಟುಕೊಂಡು ಚಪ್ಪರಿಸುತ್ತ, 'ರೀ ಸುಮ್ಮನೆ ಕುಳಿತುಕೊಳ್ರಿ, ರಿಟೈರ್ ಆಗಿರೋದು ನಿಮಗೆ, ನನಗಲ್ಲ' ಎಂದಾಗ ಗುಂಡ ಸುಸ್ತೋ ಸುಸ್ತು.

**ಎಂ.ಕೆ. ಮಂಜುನಾಥ್, ಬೆಂಗಳೂರು**

## ತಪ್ಪು ಹೇಗಾಗುತ್ತದೆ?!

ಮನೆಯ ಫೋನ್ ಬಿಲ್ ಅತಿ ಹೆಚ್ಚು ಬಂದಾಗ ಯಜಮಾನರು ಸ್ವಯಂ ತಾನು ಕಚೇರಿಯ ಫೋನ್ ಬಳಸುತ್ತಿರುವುದಾಗಿ ತಿಳಿಸಿ ಮನೆಯ ಇತರ ಎಲ್ಲಾ ಸದಸ್ಯರನ್ನೂ ಬಳಿ ಕರೆದು ವಿಚಾರಿಸಿದರು.

ಪತ್ನಿ: ನಾನೂ ಹೆಚ್ಚಾಗಿ ಆಫೀಸಿನ ಫೋನನ್ನೇ ಬಳಸುತ್ತೇನೆ. ಗೆಳತಿಯರ ಜೊತೆಗಿನ ಹರಟೆ ಮನೆಯ ಫೋನಿನಿಂದ ಸಾಧ್ಯವೇ?

ಮಗ: ನಾನಂತೂ ಬೆಳಿಗ್ಗೆ 7 ಗಂಟೆಗೇ ಮನೆಯಿಂದ ಹೊರಡುತ್ತೇನೆ. ಫೋನ್ ಏನಿದ್ದರೂ ಆಫೀಸಿನಿಂದಲೇ...

ಮಗಳು: ಕಂಪೆನಿಯಲ್ಲಿ ನನ್ನ ಡೆಸ್ಕ್ ಮೇಲೆಯೇ ಫೋನ್ ಅಳವಡಿಸಿದ್ದಾರೆ. ನಾನು ಅಲ್ಲಿಂದಲೇ ಎಲ್ಲಾ ಕರೆಗಳನ್ನೂ ಮಾಡುತ್ತೇನೆ; ಮತ್ತೆ ಹೇಗೆ ಫೋನ್ ಬಿಲ್ ಇಷ್ಟೊಂದು ಹೆಚ್ಚಾಯಿತು?

ಆಗ ಅವರೆಲ್ಲರ ದೃಷ್ಟಿ ಅಲ್ಲೇ ಮೂಲೆಯಲ್ಲಿ ತುಟಿ ಪಿಟಕ್ ಎನ್ನದೆ ನಿಂತಿದ್ದ ಮನೆ ಕೆಲಸದ ನಿಂಗಿಯ ಕಡೆ ಪ್ರಶ್ನಾರ್ಥಕವಾಗಿ ಹರಿಯಿತು...

ನಿಂಗಿ: ಮತ್ತಿನ್ನೇನು, ನೀವೆಲ್ಲರೂ ನಿಮ್ಮ ಕೆಲಸದ ಸ್ಥಳದಿಂದಲೇ ಫೋನ್ ಮಾಡುತ್ತಿದ್ದೀರಿ, ನಾನೂ ಹಾಗೆ ಮಾಡಿದರೆ ಮಾತ್ರ ತಪ್ಪು ಹೇಗಾಗುತ್ತದೆ?'

**ವಿ. ರಮಣ್ ಶೆಟ್ಟಿ ರೆಂಜಾಳ್, ಮುಂಬೈ**



ಚಿತ್ರಗಳು: ಗಣೇಶ ಆಚಾರ್ಯ